# ಜಮುರಾ ರಾಷ್ಟ್ರೀಯ ನಾಟಕೋತ್ಸವ : ೩ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ : ಜ. 2** - ಬುದ್ಧಿವಂತಿಕೆ ಕೆಲವೊಮ್ಮೆ ಮೋಸ ಮಾಡುತ್ತದೆ. ಆದರೆ ಪ್ರಜ್ಞಾವಂತಿಕೆ ಮೋಸ ಮಾಡುವುದಿಲ್ಲ. ಬುದ್ಧಿವಂತಿಕೆ ಸ್ವಾರ್ಥದ ಬಗ್ಗೆ ಯೋಚಿಸಿದರೆ ಪ್ರಜ್ಞಾವಂತಿಕೆ ಸರ್ವರ ಅಭ್ಯುದಯವನ್ನು ಬಯಸುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದಲ್ಲಿ ನಡೆಯುತ್ತಿರುವ ಜಮುರಾ ರಾಷ್ಟ್ರೀಯ ನಾಟಕೋತ್ಸವದ 3ನೇ ದಿನದ ಕಾರ್ಯಕ್ರಮದಲ್ಲಿ ದಿವ್ಯಸಾನ್ನಿಧ್ಯ ವಹಿಸಿ ಪುನರ್ಜನ್ಮವನ್ನು ಯಾಕೆ ನಂಬುತ್ತೀರಿ? ಮತ್ತು ಏಕೆ ನಂಬುತ್ತೀರಿ ವಿಷಯ ಕುರಿತು ಚಿಂತನೆ ನಡೆಸಿದ ಶ್ರೀಗಳು, ಅನೇಕರು ಭ್ರಮೆಯನ್ನು ಬಿತ್ತುತ್ತಾರೆ. ಅನೇಕ ಧರ್ಮಗಳು ಪುನರ್ಜನ್ಮ ನಂಬುತ್ತವೆ. ಅದರ ಮೇಲೆ ಭೀತಿ ಹುಟ್ಟಿಸಿ ತಮ್ಮ ಧರ್ಮಕ್ಕೆ ಸೆಳೆಯುವ ಪ್ರಯತ್ನ ಮಾಡುತ್ತಾರೆ. ಕೆಲವರು ಹುಸಿತನದ ಮೇಲೆ ಮುಗ್ಧರನ್ನು ಸೆಳೆಯಲು ಪ್ರಯತ್ನಿಸುತ್ತಾರೆ. ಅವರನ್ನು ಭ್ರಮಾಧೀನರನ್ನಾಗಿಸುತ್ತಾರೆ. ಕಾರಣ ಅಲ್ಲಿ ವೈಚಾರಿಕ ಚಿಂತನೆ ಇರುವುದಿಲ್ಲ. ಬಸವಣ್ಣ, ಸಾಕ್ರೆಟಿಸ್, ಶೇಕ್ಸ್‌ಪಿಯರ್, ಬುದ್‌ಧ, ಅಂಬೇಡ್ಕರ್‌ರಂತೆ ಪ್ರಜ್ಞಾವಂತಿಕೆ ಇರುವುದಿಲ್ಲ. ಮುಗ್ಧರೂ ಕೂಡ ಪ್ರಜ್ಞಾವಂತರಾಗಬೇಕು. ಜನಸಾಮಾನ್ಯರು ಅಕ್ಷರವಂತರಾಗಬೇಕು. ವಿದ್ಯಾವಂತರು, ಬುದ್ಧಿವಂತರು, ಪ್ರಜ್ಞಾವಂತರು ಹೃದಯವಂತರಾಗಬೇಕು. ನಾವು ಸತ್ಯಕ್ಕೆ ಸಮೀಪವಿರುವ ಸಂಗತಿಗಳನ್ನು ನಂಬಬೇಕು. ಕೆಲವರು ಸಾಧನೆಯ ಮೂಲಕ ಪುನರ್ಜನ್ಮ ಪಡೆದುಕೊಂಡಿದ್ದಾರೆ ಎಂದರು.

ಸನ್ಮಾನ ಸ್ವೀಕರಿಸಿದ ಮಾತನಾಡಿದ ನಾಟಕಕಾರ ಕೆ.ವೈ. ನಾರಾಯಣ ಸ್ವಾಮಿ, ಶ್ರೀಮಠ ನಾಟಕಗಳನ್ನು ಆಡಿಸುತ್ತಿರುವುದು ಸಂತಸದ ಸಂಗತಿ. ಭಾರತದ ಯಾವ ಮಠಗಳಲ್ಲು ಇಂತಹ ಪರಂಪರೆ ಇಲ್ಲ. ಕರ್ನಾಟಕದ ಇಂತಹ ಮಠಗಳಲ್ಲಿ ಉಳಿಸಿಕೊಂಡು ಬಂದಿರುವುದು ಶ್ಲಾಘನೀಯ. 12ನೇ ಶತಮಾನದಲ್ಲಿ ನಡೆದ ಶರಣರಿಂದ ಮಾನವ ಉದ್ಧಾರ ಮಹತ್ತರವಾದ ಘಟನೆ ಅದು ಇಂದಿನವರೆಗೂ ನಡೆದುಕೊಂಡು ಬರುತ್ತಿರುವುದು ಪವಾಡವೆಂದೇ ಭಾವಿಸಬೇಕು. ಬಸವಯುಗದಲ್ಲಿ ದಾರಿ ತಪ್ಪುತ್ತಿದ್ದ ಜನರನ್ನು ಸರಿದಾರಿಗೆ ತರುವ ಕೆಲಸ ಅನನ್ಯವಾದುದು. ಸಮಾಜೋಧಾರ್ಮಿಕ ಚಳುವಳಿ ಅದು. ಬಸವಣ್ಣನವರು ಮಾತನಾಡಿದ ಭಾಷೆಯೊಳಗೆ ನಾವು ಮಾತನಾಡುತ್ತಿರುವುದು ಸಂತಸದ ಸಂಗತಿ. ವಚನಗಳ ಓದಿನಿಂದ ಸಂಸ್ಕಾರ ಹೆಚ್ಚಾಗುತ್ತಿದೆ. ಬಸವಧರ್ಮವನ್ನು ಅನುಸರಿಸದೆ ರಾಜ್ಯ ಮುಂದೆ ಸಾಗಲು ಸಾಧ್ಯವಿಲ್ಲ. ಬಸವತತ್ತ್ವವನ್ನು ಅಪ್ಪಿಕೊಂಡು ಬದುಕಬೇಕಿದೆ. ರಂಗಭೂಮಿ ಮನುಷ್ಯನ ಉತ್ತಮ ಬದುಕಿಗೆ ದಿಕ್ಸೂಚಿ. ಇದು ಜೀವಪರವಾದದ್ದು ಎಂದರು.

ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಕೆ.ಎಂ. ಶಿವಸ್ವಾಮಿ ಮಾತನಾಡಿ, ನಾಟಕಗಳಿಗೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ವಿಶೇಷ ಶಕ್ತಿ ಇದೆ. ಗಾಂಧೀಜಿ ಅವರು ಚಿಕ್ಕವರಿದ್ದಾಗ ಸತ್ಯಹರಿಶ್ಚಂದ್ರ ನಾಟಕ ನೋಡುತ್ತಾರೆ. ಅದರಿಂದ ಅವರ ಮನಸ್ಸು ಪರಿವರ್ತನೆಯಾಗುತ್ತದೆ. ಉತ್ತಮ ನಾಟಕಗಳು ಮನುಷ್ಯನ ಮೇಲೆ ತೀವ್ರ ಪ್ರಭಾವ ಬೀರುತ್ತವೆ ಎಂದು ತಿಳಿಸಿದರು. ಶ್ರೀಮತಿ ಮಾಧುರಿ ವೇದಿಕೆಯಲ್ಲಿದ್ದರು.

ನಂತರ, ಸಾರಾಖೆನ್ ರಚನೆ, ನಿಷಾದಿ ಗಲ್ಲೆವೇಲಾ, ಶ್ರೀಲಂಕಾ ಇವರ ವಿನ್ಯಾಸ, ಸಂಗೀತ, ನಿರ್ದೇಶಿಸಿರುವ 4.48 ಸೈಕೋಸಿಸ್ ಇಂಗ್ಲಿಷ್ ನಾಟಕವನ್ನು ಬೆಂಗಳೂರಿನ ಮಾಮನ ರಂಗತಾಣ ತಂಡದವರು ಅಭಿನಯಿಸಿದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಪಿ. ವೀರೇಂದ್ರಕುಮಾರ್ ಸ್ವಾಗತಿಸಿದರು. ಕೆ.ಪಿ.ಎಂ. ಗಣೇಶಯ್ಯ ನಿರೂಪಿಸಿದರು.


ಜಮುರಾ ಕಲಾಲೋಕ (ರಿ.)
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ


ಸಿರಿಗನ್ನಡಂ ಗೆಲ್ಗೆ
ಜಮುರಾ ಕಲಾಲೋಕ (ರಿ.)
ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ
ಜಮುರಾ
ರಾಷ್ಟ್ರೀಯ ನಾಟಕೋತ್ಸವ
2021-22